PAPERS LAID ON THE TABLE

SECRETARY.—Sir, I lay on the Table of the House the *Second and Third list of Unrestarred Questions and Answers of Seventh Session.

MR DEPUTY SPEAKER : Papers laid.

ಮನವಿಗಳು.

ಶ್ರೀ ಎಸ್. ಎಂ. ಕೀರನಾಳಿ ಚಂದ್ರಶೇಖರ್.—ಅಧ್ಯಕ್ಷರೆ, ನಾನು ೫ ಜಾಗಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಪೂರ್ತಿ ನಿಂತುಹೋಗಿದೆ ಎಂಬ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ.

ಉಪಾಧ್ಯಕ್ಷರು.—ಮುಂದಿನ ವಾರದಲ್ಲಿ ಹಾಕುತ್ತೇವೆ.

ಶ್ರೀ ಜಿ. ಕೆ. ತಕ್ಕೆಡ್.—ಅಧ್ಯಕ್ಷರೇ, ತಮಿಳುನಾಡಿನಲ್ಲಿ ಕನ್ನಡ ರೈತರಿಗೆ ಹಿಂಸೆ ಆಂಥ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ತಮಿಳುನಾಡಿನಲ್ಲಿ ಕನ್ನಡಿಗರ ಕಣ್ಣೀರು, ಹಣ್ಣು ಹಣ್ಣು ಮುದುಕಿ, ಸಿದ್ದಮ್ಮನ ಹಿಡುವಳಿ ಕೇವಲ ಒಂದೂವರೆ ಎಕರೆ, ಆಕೆಯೇ ಹೇಳುವಂತೆ ಆದರಲ್ಲಿ ೨೦ ವರ್ಷದ ಅನುಭವ. ಅಲ್ಲಿ ಬೆಳೆಸಿದ ಕಾಫಿ ಕಳೆದ ೮ ವರ್ಷಗಳಿಂದ ಫಲ ನೀಡುತ್ತಿದ್ದವು. ಆದರೆ ತಮಿಳುನಾಡು ಭೂ ಬಿಟ್ಟ ಅಧಿಕಾರಿಗಳ ಹಲ್ಲೆಗೆ ಸಿಕ್ಕಿ ಧ್ವಂಸವಾಯಿತು.

ಉಪಾಧ್ಯಕ್ಷರು.—ತಾವು ಅದರ ಬಗ್ಗೆ ನೋಟೀಸ್ ಕೊಡಿ.

ಶ್ರೀ ಜಿ. ಕೆ. ತಕ್ಕೆಡ್.—ಅದನ್ನು ಪ್ರತಿಭಟಿಸಿದ್ದರ ಫಲ ಅವರನ್ನು ಹಿಡಿದು ಜೈಲಿಗೆ ಹಾಕಲಿಕ್ಕೆ ಹೊರಟಿದ್ದಾರೆ. ಆಸ್ತಿಯನ್ನು ಕಿತ್ತುಕೊಳ್ಳಲಿಕ್ಕೆ ಹೊರಟಿದ್ದಾರೆ. ಅಲ್ಲಿಂದ ಕನ್ನಡಿಗರನ್ನು ಹೊರದೂಡಿ ಚಿತ್ರಹಿಂಸೆ ಕೊಡುತ್ತಿದ್ದಾರೆ. ಈಗ ಬೆಂಗಳೂರಿಗೆ ಬಂದು ವಿಧಾನಸೌಧದ ಮುಂದೆ ಸತ್ಯಾಗ್ರಹ ಮಾಡಲು ಅವರು ನಿರ್ಧರಿಸಿದ್ದಾರೆ. ಆದ್ದರಿಂದ, ಸರ್ಕಾರ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

೧೦–೫೦ ಎ. ಎಂ.

ನಿನ್ನೆ ದಿವಸ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಚುನಾವಣೆಯಲ್ಲಿ ಮತದಾನ ಸರಿಯಾಗಿ ಆಗಿಲ್ಲ, ಅಲ್ಲಿ ಸುಮಾರು ೭ ಸಾವಿರಕ್ಕೂ ಹೆಚ್ಚು ಕೋಟಾ ಮತಗಳನ್ನು ಚಲಾಯಿಸಿದ್ದಾರೆ. ಅದು ಇವತ್ತಿನ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಆದ್ದರಿಂದ ನಡೆದಂಥ ಚುನಾವಣೆಯನ್ನು ರದ್ದುಗೊಳಿಸಿ ಆಡಳಿತ ಅಧಿಕಾರಿಯನ್ನು ನೇಮಿಸಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮತ್ತು ಈ ಎರಡು ವಿಚಾರಗಳ ಬಗ್ಗೆ ಸರ್ಕಾರದವರು ಇವತ್ತು ಉತ್ತರಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ತತ್‌ಕ್ಷಣ ಕೊಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಚೌಡಯ್ಯ.—ಹರಿಜನ–ಗಿರಿಜನ ಹಾಗೂ ಹಿಂದುಳಿದ ವರ್ಗಗಳ ತರಬೇತಿ ಕೇಂದ್ರಕ್ಕೆ ಸೇರಿದ ಆರ್ಜಿಗಳನ್ನು ಪರಿಶೀಲಿಸಲು ೧೭ ರಂದು ಕೊನೆ ತಾರೀಖು ಎಂದು ಮಾಡಿದ್ದಾರೆ. ಅವರಿಗೆ ಆಗಿರುಕ್ಕೆ ತೊಂದರೆಯ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ೧೫ ದಿವಸಗಳ ಕೆಳಗೆ ಕಳುಹಿಸಿದ್ದೇನೆ. ದಯಮಾಡಿ ಅದನ್ನು ಸೋಮವಾರದೊ ಹಾಕುತ್ತೀರಾ ?

ಉಪಾಧ್ಯಕ್ಷರು.—ಅದನ್ನು ನಾನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ಪಿ. ರಾಮದೇವ್.—ಬಹಳ ಗಂಭೀರವಾದ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಸರ್ಕಾರದಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ಅನುದಾನ ಕೊಟ್ಟಿದ್ದಾರೆ. ಅಲ್ಲಿ ನಿನ್ನೆ ನಡೆದ

*Annexure